ಕರ್ನಾಟಕ ಸರ್ಕಾರ
Government of karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in

DSERT

Phone - 080 26980100
Fax - 080 26422377

ಸಂ:ETC-6/ಎಜು.ಪಾಠಪ್ರಸಾರ/ವೇ.ಪಟ್ಟಿ/03/18-19 ದಿನಾಂಕ: 28.06.2019

## ಸುತ್ತೋಲೆ

ವಿಷಯ : ಎಜುಸ್ಯಾಟ್ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಹಿನ್ನೆಲೆಯಲ್ಲಿ ವಿವಿಧ ಹಂತಗಳ ಶೈಕ್ಷಣಿಕ ಅಧಿಕಾರಿಗಳಿಗೆ ಜವಾಬ್ದಾರಿ ಹಂಚಿಕೆ ಬಗ್ಗೆ.

ಡಿ.ಎಸ್.ಇ.ಆರ್.ಟಿ. ಹಬ್ ಮೂಲಕ ಎಜುಸ್ಯಾಟ್ ಕಾರ್ಯಕ್ರಮವನ್ನು ಪ್ರಸಾರ ಮಾಡಲಾಗುತ್ತಿದ್ದು ಪ್ರಮುಖವಾಗಿ ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಚಾಮರಾಜನಗರ, ಯಾದಗಿರಿ, ಗುಲ್ಬರ್ಗಾ ಮತ್ತು ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ಬ್ಲಾಕ್‌ನ ಶಾಲೆಗಳು ಈ ಕಾರ್ಯಕ್ರಮದ ಪ್ರಯೋಜನವನ್ನು ಪಡೆಯುತ್ತಿದ್ದು ಮಂಡ್ಯ ಜಿಲ್ಲೆಯಲ್ಲಿ ಕೆಲವು ಶಾಲೆಗಳು ಸ್ವೀಕೃತಿ ಕೇಂದ್ರಗಳ ವ್ಯವಸ್ಥೆಗಳನ್ನು ಮಾಡಿಕೊಂಡು ಕಾರ್ಯಕ್ರಮದ ಪ್ರಯೋಜನ ಪಡೆಯುತ್ತಿದ್ದಾರೆ. ಅದೇ ರೀತಿ 2019-20ನೇ ಸಾಲಿನಿಂದ ಎಜುಸ್ಯಾಟ್ ಕಾರ್ಯಕ್ರಮವನ್ನು ದಿನಾಂಕ:15-07-2019ರಿಂದ ಕಾರ್ಯಕ್ರಮ ಪ್ರಾರಂಭಿಸಲಾಗುವುದು. ಶಾಲಾ -ಶಿಕ್ಷಕರು, ಮುಖ್ಯ ಶಿಕ್ಷಕರು ಮತ್ತು ಅಧಿಕಾರಿಗಳು ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳ್ಳಲು ಈ ಕೆಳಕಂಡಂತೆ ಸೂಕ್ತ ಕ್ರಮ ವಹಿಸುವುದು.

- ಪ್ರಸಾರಕ್ಕೆ ಸಂಬಂಧಿಸಿದ ಉಪಕರಣಗಳನ್ನು ಪ್ರಸಾರಪೂರ್ವದಲ್ಲಿ ಸಿದ್ಧಪಡಿಸಿಕೊಂಡಿರಬೇಕು.
- ಪ್ರಸಾರದ ವೇಳಾಪಟ್ಟಿಯನ್ನು ಎಜುಸ್ಯಾಟ್ ಕೊಠಡಿಯಲ್ಲಿ ಪ್ರದರ್ಶಿಸಿರಬೇಕು.
- ಎಜುಸ್ಯಾಟ್ ಪಾಠಗಳನ್ನು ಸಾಮರ್ಥ್ಯವಾರು ಆಯ್ಕೆ ಮಾಡಲಾಗಿದೆ.
- ಪ್ರಸಾರವಾಗುವ ಪಾಠದಲ್ಲಿ ಆಯ್ಕೆ ಮಾಡಿದ ಸಾಮರ್ಥ್ಯದ ಜೊತೆಗೆ ಇನ್ನುಳಿದ ಸಾಮರ್ಥ್ಯಗಳನ್ನು ಶಿಕ್ಷಕರು ಗಮನಿಸಿ ಪಾಠ ಪ್ರಸಾರದ ನಂತರ ಮಕ್ಕಳಿಗೆ ತಿಳಿಯಪಡಿಸಬೇಕು.
- ಕೆಲವೊಂದು ಅವಧಿಗಳಲ್ಲಿ ವಿದ್ಯಾರ್ಥಿಗಳ ಜ್ಞಾನವರ್ಧನೆಗಾಗಿ ಇತರೆ ಸಿ.ಡಿ.ಗಳನ್ನು ಬಳಸಲಾಗಿದೆ.
- ಕಾರ್ಯಕ್ರಮದಲ್ಲಿ 4 ರಿಂದ 8ನೇ ತರಗತಿಯವರೆಗೆ ಭಾಷೆ ಮತ್ತು ಕೋರ್ ವಿಷಯಗಳಲ್ಲಿ ಪಾಠ ಪ್ರಸಾರ ಮಾಡಲಾಗುವುದು.
- ಪಾಠ ಪ್ರಸಾರವಾಗುವ ದಿನಾಂಕ, ಸಮಯ, ವಿಷಯ ಹಾಗೂ ಪಾಠಗಳ ವಿವರಗಳನ್ನೊಳಗೊಂಡ ಎಲ್ಲಾ ವೇಳಾ ಪಟ್ಟಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದ್ದು ಅದರಂತೆ ಕ್ರಮವಹಿಸುವುದು.
- ಶಾಲೆಗಳಲ್ಲಿ ಎಜುಸ್ಯಾಟ್ ಕೊಠಡಿಯಿದ್ದು, ಕಾರ್ಯಕ್ರಮ ಪ್ರಸಾರವಾಗುವುದಕ್ಕೆ 5 ನಿಮಿಷ ಮೊದಲು ಸಂಬಂಧಿಸಿದ ಮಕ್ಕಳನ್ನು ಕರೆದು ಕೊಠಡಿಯಲ್ಲಿ ಕುಳ್ಳಿರಿಸುವುದು.
- ಆಯಾ ವಿಷಯ ಶಿಕ್ಷಕರು ಪಾಠದ ಸ್ವೀಕೃತಿಗಾಗಿ ಸೂಕ್ತವಾದ ಸಿದ್ಧತೆಯನ್ನು ಮುಂಚಿತವಾಗಿ ಮಾಡಿಕೊಳ್ಳತಕ್ಕದ್ದು.
- ಪಾಠ ಪ್ರಸಾರವಾಗುವ ಮೊದಲು ಪೂರ್ವ ಚಟುವಟಿಕೆಗಳನ್ನು ಕಡ್ಡಾಯವಾಗಿ ಮಾಡಿಸುವುದು.
- ಪ್ರಸಾರ ಕಾಲದಲ್ಲಿ ವಿದ್ಯಾರ್ಥಿಗಳು ಅಗತ್ಯ ಟಿಪ್ಪಣಿಗಳನ್ನು ಮಾಡಿಕೊಳ್ಳುವಂತೆ ಸೂಚಿಸುವುದು.
- ಪಾಠ ಪ್ರಸಾರದಲ್ಲಿನ ಸಂದೇಹಗಳನ್ನು ಟಿಪ್ಪಣಿ ಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ತಿಳಿಸುವುದು.
- ಪಾಠ ಪ್ರಸಾರದ ನಂತರ 10 ನಿಮಿಷಗಳ ಅವಧಿಯಲ್ಲಿ ಮಕ್ಕಳೊಂದಿಗೆ ವಿಷಯ ಕುರಿತು ಚರ್ಚಿಸಿ ಸಂದೇಹಗಳನ್ನು ಬಗೆಹರಿಸುವುದು.

- ಪ್ರಸಾರೋತ್ತರ ಚಟುವಟಿಕೆಗಳನ್ನು ಈ ಹಿಂದೆ ನೀಡಿರುವ ಕೈಪಿಡಿಯನ್ನು ಆಧರಿಸಿ ಕಡ್ಡಾಯವಾಗಿ ಮಾಡಿಸುವುದು.
- ಮುಂದಿನ ದಿನಗಳಲ್ಲಿ ಯಾವ ಪಾಠ ಯಾವ ಸಮಯದಲ್ಲಿ ಪ್ರಸಾರವಾಗುತ್ತದೆ ಎಂಬುದನ್ನು ಸೂಚಿಸುವುದು.
- ಪ್ರಸಾರದ ನಂತರ ನಿಗಧಿಪಡಿಸಿದ ಪುಸ್ತಕದಲ್ಲಿ ಪಾಠದ ಕುರಿತು ಅಭಿಪ್ರಾಯ / ಹಿಮ್ಮಾಹಿತಿಯನ್ನು ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ದಾಖಲಿಸುವುದು.

<u>ಉಪನಿರ್ದೇಶಕರು(ಅಭಿವೃದ್ಧಿ)/ ಉಪನಿರ್ದೇಶಕರು(ಆಡಳಿತ),ಮುಖ್ಯೋಪಾಧ್ಯಾಯರು, ಬಿಆರ್.ಸಿ., ಬಿ.ಇ.ಓ, ಸಿ.ಆರ್.ಪಿ, ಜವಾಬ್ದಾರಿಗಳು:-</u>

- ಕಾರ್ಯಕ್ರಮಕ್ಕೆ ಸಂಬಂಧಿಸಿದ ಸುತ್ತೋಲೆ ಮತ್ತು ವೇಳಾಪಟ್ಟಿಯನ್ನು ಎಲ್ಲಾ ಶಾಲೆಗಳಿಗೆ ವಿತರಿಸಲು ಕ್ರಮ ವಹಿಸುವುದು.
- ವೇಳಾಪಟ್ಟಿಯ ಜೆರಾಕ್ಸ್ ಪ್ರತಿಯನ್ನು ಪಡೆಯಲು ಲಭ್ಯವಿರುವ ಸಂಚಿತ ನಿಧಿಯಿಂದ ಖರ್ಚನ್ನು ಭರಿಸುವಂತೆ ಶಾಲಾ ಮುಖ್ಯ ಶಿಕ್ಷಕರಿಗೆ ತಿಳಿಸುವುದು.
- ಶಾಲೆಗಳಲ್ಲಿ ಕಾರ್ಯಕ್ರಮ ಪ್ರಸಾರ ಕುರಿತಂತೆ ವೇಳಾಪಟ್ಟಿ ಅನುಸಾರ ಸೂಕ್ತ ಕ್ರಮ ಕೈಗೊಳ್ಳುವುದು.
- ಸಭೆಗಳಲ್ಲಿ ಕಾರ್ಯಕ್ರಮ ಕುರಿತು ಮಾಹಿತಿ ನೀಡುವುದು.
- ಸ್ವೀಕೃತಿ ಕೇಂದ್ರದಲ್ಲಿ ಸಣ್ಣಪುಟ್ಟ ತಾಂತ್ರಿಕ ದೋಷಗಳಿದ್ದಲ್ಲಿ ಸರಿಪಡಿಸಲು ಸೂಕ್ತ ಕ್ರಮವಹಿಸುವುದು.
- ಸ್ಥಳೀಯ ದಾನಿಗಳಿಂದ ಅದಕ್ಕಾಗಿ ಸಹಾಯ ಪಡೆಯುವುದು.
- ಜಿಲ್ಲಾ ಹಂತ ಬ್ಲಾಕ್ ಹಂತದಲ್ಲಿ ಅಧಿಕಾರಿಗಳು ಶಾಲೆಗಳನ್ನು ಹಂಚಿಕೊಂಡು ಕಾರ್ಯಕ್ರಮವನ್ನು ಮೇಲ್ವಿಚಾರಣೆ ಮಾಡುವುದು.
- ಉಪನಿರ್ದೇಶಕರು(ಅಭಿವೃದ್ಧಿ) ಮತ್ತು ಉಪನಿರ್ದೇಶಕರು(ಆಡಳಿತ), ಕ್ಷೇತ್ರ ಶಿಕ್ಷಣಾಧಿಕಾರಿಗಳು ರವರು ತಮ್ಮ ಕ್ಷೇತ್ರದಲ್ಲಿ ಎಜುಸ್ಯಾಟ್ ಕಾರ್ಯಕ್ರಮ ಪ್ರಸಾರ ಕುರಿತಂತೆ ಮಾಹಿತಿಯನ್ನು ಹೊಂದಿರುವುದು.
- ಮಾಸಿಕವಾಗಿ ರಾಜ್ಯ ಕಛೇರಿಗೆ ಕಾರ್ಯಕ್ರಮದ ಪ್ರಗತಿಯನ್ನು ಸಲ್ಲಿಸುವುದು.

ನಿರ್ದೇಶಕರು
ಡಿ.ಎಸ್.ಇ.ಆರ್.ಟಿ.
ಬೆಂಗಳೂರು

ಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಮತ್ತು ಅಭಿವೃದ್ಧಿ ರವರಿಗೆ ಮಾಹಿತಿಗಾಗಿ.
2. ಬೆಂಗಳೂರು ಗ್ರಾಮಾಂತರ ಜಿಲ್ಲೆ, ರಾಮನಗರ, ಚಾಮರಾಜನಗರ, ಯಾದಗಿರಿ, ಗುಲ್ಬರ್ಗಾ ಮತ್ತು ಮೈಸೂರು ಜಿಲ್ಲೆಯ ಮುಖ್ಯ ಶಿಕ್ಷಕರಿಗೆ ಸೂಕ್ತ ಕ್ರಮಕ್ಕಾಗಿ.
3. ಇತರೆ ಜಿಲ್ಲೆಗಳಲ್ಲಿ ಎಜುಸ್ಯಾಟ್ ಕಾರ್ಯಕ್ರಮವನ್ನು ಅಳವಡಿಸಿಕೊಂಡಿದ್ದಲ್ಲಿ ವೇಳಾಪಟ್ಟಿಯನ್ನು ಅನುಸರಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದು.

ಪ್ರತಿಯನ್ನು

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಮಾಹಿತಿಗಾಗಿ.
2. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಅಭಿಯಾನ, ಬೆಂಗಳೂರು ರವರಿಗೆ ಮಾಹಿತಿಗಾಗಿ.
3. ಕಛೇರಿ ಪ್ರತಿ.